

## ಇನ್ನೂ ಇದೆ ರಾಜ ಮಹಾರಾಜರ ಕಾಲದ ಪಲ್ಲಕ್ಕಿ



ಹಿಂದಿನ ಕಾಲದಲ್ಲಿ ಮಹಾರಾಜರು, ಧರ್ಮಗುರು ಅಥವಾ ರಾಣಿಯು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ದಣಿವಾಗದಂತೆ ಅವರನ್ನು ಪಲ್ಲಕ್ಕಿಯಲ್ಲಿ ಕರೆದೊಯ್ಯುವ ವ್ಯವಸ್ಥೆ ಇತ್ತು. ಇಂತಹ ಪಲ್ಲಕ್ಕಿ ಚಿತ್ರದುರ್ಗದ ಮುರುಘರಾಜೇಂದ್ರ ಮಠದಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದಾಗಿದೆ. ಇಂದಿಗೂ ಸುಸ್ಥಿತಿಯಲ್ಲಿರುವ ಇದನ್ನು ಅಲ್ಲಿಗೆ ಹೋಗುವ ಪ್ರವಾಸಿಗರು ವೀಕ್ಷಿಸಬಹುದು. ಅತ್ಯಂತ ಗುಣಮಟ್ಟದ ಸಾಮಗ್ರಿಗಳಿಂದ ತಯಾರು ಮಾಡಲಾದ ಈ ಪಲ್ಲಕ್ಕಿಯು ಇಂದಿಗೂ ಹಾಳಾಗದೆ ತನ್ನ ನೈಜ ಸೌಂದರ್ಯ ಉಳಿಸಿಕೊಂಡಿದೆ.

–ಡಾ.ಕೆ.ವಿ. ಸಂತೋಷ್, ಚಿತ್ರದುರ್ಗ



## ವರುಣ ದೇವನ ಕಂಡಿರಾ?

ಮಳೆಯ ಅಧಿದೇವರು ವರುಣ ಎಂಬುದು ನಮ್ಮೆಲ್ಲರಿಗೂ ತಿಳಿದಿರುವ ಸತ್ಯ. ಮಳೆ ಬಾರದಿದ್ದಾಗ 'ಹೇ ವರುಣ ದೇವಾ ಕೃಪೆ ಮಾಡು' ಎಂದು ಮೊರೆ ಇಡುತ್ತಲೇ ಇರುತ್ತೇವೆ. ಇತ್ತೀಚೆಗಷ್ಟೇ ನಾನು ಗೆಳೆಯರೊಂದಿಗೆ ದೇಶದ ಪೂರ್ವ ಕರಾವಳಿಯ ನಗರ ವಿಶಾಖಪಟ್ಟಣಂಗೆ ಭೇಟಿ ನೀಡಿದ್ದೆ. ಈ ನಗರ ತನ್ನ ಹಲವಾರು ವಿಶೇಷತೆಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಅಂತಹ ಆಕರ್ಷಣೆಗಳಲ್ಲೊಂದು, ಅಲ್ಲಿನ 'ವಿಶಾಖಾ' ಸಂಗ್ರಹಾಲಯ. ಇಲ್ಲಿ ಅತ್ಯಮೂಲ್ಯ ಸಂಗ್ರಹಿಕೆಗಳಿವೆ. ನನ್ನನ್ನು ಗಮನ ಸೆಳೆದದ್ದು ಈ ವರುಣ ದೇವನ ಮೂರ್ತಿ. ನಾನಂತೂ, ವರುಣನ ದೇವಾಲಯವಾಗಲಿ, ಮೂರ್ತಿಯಾಗಲಿ ಕಂಡಿರಲಿಲ್ಲ. ಛಾಯಾಚಿತ್ರ ತೆಗೆಯಲು ಅನುಮತಿ ಇರದಿದ್ದರು ಕಾವಲುಗಾರನ ಕಣ್ತಪ್ಪಿಸಿ ಈ ವರುಣನ ಮೂರ್ತಿಯನ್ನು ನನ್ನ ಕ್ಯಾಮೆರಾದಲ್ಲಿ ಸೆರೆ ಹಿಡಿದೆ. ಅಲ್ಲಿಗೆ ಹೋದವರು ತಪ್ಪದೇ ನೋಡಲೇಬೇಕಾದ ತಾಣ ವಿಶಾಖಾ ಮ್ಯೂಸಿಯಂ.

–ವೆಂಕಟೇಶ ಮುದಗಲ್, ಕಲಬುರ್ಗಿ




ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ. ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.

ಇಮೇಲ್ ವಿಳಾಸ:

**editorsu@sudha.co.in**